ಅಕೀ ಗಂಡನೂ – 'ಇರ್ಲಿ ಬಿಡ, ನೀ ಮನೀ ದಗದಾ, ಮಕ್ಕಳಾ ನೋಡ್ಕೋ ಅದss ಸಾಕ' – ಅಂತ ಕಾಳಜೀ ಮಾಡತಿದ್ದ. ಯಾವಾಗ ಪಾರವ್ವ ಹೊಲಕ್ಕ ಹೋಗೂದು ಬಿಟ್ಟಳೋ ಮುಂದೆ ಮಕ್ಕಳಿಗೆ ಸಾಲಿಗೆ ಹಾಕಿ – ನೀವೂ ಪದ್ದಕ್ಕನಂಗ್ ಓದ್ರೀ ಬರೀರಿ ಅಂತಾ ಅನ್ನಾಕ ಹತ್ತಿದ್ಳೋ ಮಂಟವ್ವಗ ಹೊಟ್ಟಿಬ್ಯಾನಿ ಸುರು ಆತು. ಪಾರವ್ವ ಪದ್ದಕ್ಕನ ಮನ್ಯಾಗ ಮಕ್ಕಳಾ ಕಳಿಸಿ ಪದ್ಮಕ್ಕ ನೀ ಸ್ವಲ್ಪ ನೋಡ ಯವ್ವಾ, ಇವಕ್ಕೂ ಅ ಆ ಇ ಈ ಹೇಳ್ಕೊಡ – ಅಂತಾ ಆ ಮನೀಗ್ ಈ ಮನಿಗೆ ಎಡತಾಕಕತ್ತಿದ್ಳೋ ಮಂಟವ್ವಗ ಸುಖಾಸುಮ್ಮನ ಸಿಟ್ಟುಬರಾಕ ಹತ್ತ್ಯು. ಈ ಬಾಂಬರ ಜೊತಿ ಯಾಕ್ ಅಷ್ಟ ಹೊಕ್ಕ್ಯಾಡತೀ, ಅಷ್ಟು ಹೋಗಬ್ಯಾಡ್ ಆ ಆಚಾರಿ ಭಾಳ ಸಿಡುಕ ಅಂತ ಅನ್ನಾಕ ಹತ್ತಿದ್ಲು. ಶ್ರಿಪಾದಾಚಾರು ಒಮ್ಮೆ ಯಾವ್ದೋ ಕಾರಣಕ್ಕ ಮಂಟಮ್ಮಗ ಬಾಯಿಗೆ ಬಂಧಂಗ ಬೈದುಬಿಟ್ಟಿದ್ನಂತ. ಅದಕ್ಕ ಅಕೀಗೆ ಅಂವ ಅಂದ್ರ ಸಾಕು ಸಿಟ್ಟು... ಅಂಜಿಕೆ ಎಲ್ಲನೂ ಇತ್ತು. ಒಳಗ ಕುದಕೋತ ಇರ್ತಿದ್ಲು ಅವನ ಮುಕಾ ಕಂಡ್ರೂ.

ಶ್ರಿಪಾದಾಚಾರ್ಯರು ಯಾವಾಗ್ಲೂ ತಮ್ಮ ಅಟ್ಟದ ಮ್ಯಾಲಿನ ಕೋಣ್ಯಾಗ ಇರ್ತಿದ್ರು. ಏನಾರ ಓದಕೋಂತ, ಏನಾರಾ ಬರಕೊಂತ. ಕೆಳಗಡೆ ಬಂದಾಗ ಮಾತ್ರ ತಮ್ಮ ಅವ್ವನೊಂದಿಗೆ ಮಾತಾಡ್ಕೋಂತ... ಮಗಳ ಜತೀ ಚ್ಯಾಷ್ಟೀ ಮಾಡ್ಕೋತ ಇರ್ತಿದ್ರು. ಆವಾಗೆಲ್ಲ ಪಾರವ್ವಗ ಕರ್ದು – "ಏಯ್ ಪಾರಮ್ಮ... ನೋಡವಾ... ನಮ್ ಪದ್ಮಾಗೊಂದು ಗಂಡು ಹುಡುಕು ಲಗೂನೆ." ಅಂತಾ ಚ್ಯಾಷ್ಟೀ ಮಾಡ್ತಿದ್ದ್ರು.

ಮಣ್ಣೆತ್ತಿನ ಅಮಾಸಿ ಮುಗಿಸಿ ಮನ್ಯಾನ ಮಂದಿಯೆಲ್ಲಾ ಒಮ್ಮೆ ಉಳವಿ ಜಾತ್ರಿಗಂತ ಹೋದ್ರು. ಹೊಲದಾಗಿನ ದಗದಾ ಇನ್ನ ಮುಗಿದಿರ್ಲಿಲ್ಲ. ಈಗರೆ ಜಿಟಿಜಿಟಿ ಮಳಿ ಹಿಡಿದಿತ್ತು. ಫಕೀರಪ್ಪಗೂ ಹೊಲದಾಗಿನ ಕೆಲಸಾ. ಪಾರವ್ವ ಜ್ವರ ಬಂದು ಹಾಸಿಗೆ ಹಿಡಿದಿದ್ದಳು. ಇತ್ತಿತ್ಲಾಗಿ ಫಕೀರಪ್ಪ ಹೊಲದ ಪಾಲು ಪಾರವ್ವ ಮನೀ ಪಾಲಾಗಿ ಇಬ್ರಿಗೂ ಎತ್ತಿನಂಗ ದುಡ್ಯೂದ ಆಕ್ಕಿತ್ತು. ತಾಂವ ಗಂಡಾ ಹೇಂತಿ ಅನ್ನೂ ಖಬರ ಸತೆ ಇಲ್ದಂಗ ಆಗೋಗಿತ್ತು. ಅವನ ಮಗ್ಗಲಾಗ ಮಲಗೂದ ಹೋಗ್ಲಿ ಕುಂತ ಮಾತಾಡಾಕೂ ಸಿಗತಿದ್ದಿಲ್ಲ. ಬರೇ ಹೊಲಾ ಹೊಲಾ ಅಂತ ಅಲ್ಲೆ ಸಾಯ್ತಿದ್ದ.

ಅವಾಗನ ಶ್ರೀಪಾದಾಚಾರ್‍ರ ಅವ್ವಗ ಮಂಡಿನೋವು ಹೆಚ್ಚಾಗಿ ಅಕೀನೂ ಓಡ್ಯಾಡತ್ತಿದ್ದಿಲ್ಲ. ಪದ್ದಿ ಈಗ ಮುಂಚಿನಂಗ ಅವ್ರ ಮನೀ ಇವ್ರ ಮನೀ ಅಂತೆಲ್ಲ ಹೋಗ್ತಿದ್ದಿಲ್ಲ. ಹಿಂಗಾಗಿ ಆಚಾರ್‍ರ್‍ಗ ತಾವ ಮನೀ ಬಿಟ್ಟ ಬರ್ಬೇಕಾತು. ಇಷ್ಟ ವರ್ಸದಾಗ ಮೊಟ್ಟ ಮೊದ್ಲೆಸಲ ಎದುರು ಮನೀ ಹೊಚ್ಚಲ ಹೊರ್ಗ ಕೈಯಾಗೊಂದ್ ಬಟ್ಲಾ ಹಿಡ್ದ ನಿಂತಿದ್ರು..

"ಯಾರದೀರಿ ಯಾರದೀರಿsss ಒಳಗsss– ಏಯ್ ಪಾರವ್ವ... ಎಲ್ಲೆವಾss? ಅಂತ ದನಿಯೆತ್ತ್ರಿಸಿ ಒದರಿದರೂ ಏನ್ ಉತ್ರಾ ಬರ್ಲಿಲ್ಲ. ಅವರಿಗೆ ಮಾರ್ನೆದಿನ ತಮ್ಮ ಹೆಂಡತಿ ಶ್ರಾದ್ಧಕ್ಕ ಆಕಳ ಸಗಣಿ ಮತ್ತ ಮೂತ್ರ ಬೇಕಾಗಿತ್ತು.

ಒಳಗಿಂದ ಯಾರ್ ಉತ್ರಾ ಬರ್ದ ಏನನಿಸ್ತೋ ಅವರಿಗೆ ಗೊತ್ತಿಲ್ಲದನ ಕಾಲು ಒಳಕರೆತಂದ್ವು. ಪಾರಮ್ಮ ಜ್ವರದ ಬೆಂಕ್ಯಾಗ –ಓ ಸಹ ಅನ್ನದ ಮಕ್ಕೊಂಡಿದ್ಲು. ಸಣ್ಣಗ ನಳ್ಳ ದನಿಯಾಗsss – 'ಹೂಂರೀ ಆಮ್ಯಾಗ್ ಕೊಟ್ಟ ಕಳಸ್ತೇನಿ' ಅಂದದ್ದು ಅವ್ರಿಗೆ ಕೇಳಿರ್ಲಿಲ್ಲ.

ಅವರ ಕಾಲು ಪಾರಮ್ಮ ಮಲಗಿದ್ದ ಡೊಳ್ಳಾರಿಗಿ ಹಂತೇಲs ಬಂದಬಿಟ್ವು. ಶ್ರೀಪಾದಾಚಾರಿ ಗಾಭರಿಸಿ –"ಅರೆ ಏನಾತು ? ಔಷಧ ಏನಾರೇ ತಗೊಂಡಿಲ್ಲೋ... ಅನ್ನೋತ

ಅಕಿ ಹಣೀ ಸಹಜಾಗಿ ಮುಟ್ಟಿದ್ರು, ಕೊಳ್ಳಾಗ ಮುಟ್ಟಬೇಕು ಇನ್ನೇನ್, ಜ್ವರ ನೋಡ್ಬೇಕು! ಅವರ ದೃಷ್ಟಿ ಸೆರಗು ಜಾರಿಹೋಗಿ ಕುಬುಸ ಹರಕೊಂಡು ಹೊರಗ ಬಂದ್ ಅಕೀ ಮಲೀ ಮ್ಯಾಲ